


- ಎಚ್.ಎಸ್. ವೆಂಕಟೇಶಮೂರ್ತಿ ಅವರ 'ಮಕ್ಕಳ ಸಾಹಿತ್ಯ: ಪ್ರಬುದ್ಧತೆಯನ್ನು ಮುಚ್ಚಿಟ್ಟುಕೊಂಡ ಮುಗ್ಧತೆ!' ಲೇಖನ ಮಕ್ಕಳ ಸಾಹಿತ್ಯದ ಸ್ವರೂಪವನ್ನು ತೆರೆದಿಟ್ಟಿದೆ. ಭಾಷಾಂತರದ ಅಂತರಂಗವನ್ನು ಬಿಚ್ಚಿಟ್ಟ 'ಅನುವಾದ ಸಂವಾದ' ಗಮನ ಸೆಳೆಯಿತು. 'ಎಳೆಯರ ಆಮೋದ'ದಲ್ಲಿ ಪ್ರಕಟವಾದ ಕವಿತೆಗಳು ಇಷ್ಟವಾದವು.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**

- 'ಮಕ್ಕಳ ಸಾಹಿತ್ಯ: ಪ್ರಬುದ್ಧತೆಯನ್ನು ಮುಚ್ಚಿಟ್ಟುಕೊಂಡ ಮುಗ್ಧತೆ!' ಲೇಖನ ನಮ್ಮನ್ನು ಮತ್ತೊಮ್ಮೆ ಆ ಮುಗ್ಧ ಪ್ರಪಂಚಕ್ಕೆ ಎಳೆದೊಯ್ದಿತು.

**ಸುಲೋಚನಾ ವಾದಿರಾಜ್, ಹೊಳೆಹೊನ್ನೂರು**

- 'ಅನುವಾದ ಸಂವಾದ'ದಲ್ಲಿ ಅನುವಾದಕ ಓ.ಎಲ್. ನಾಗಭೂಷಣ ಸ್ವಾಮಿ ಅವರ 'ಮೂಲವೆನ್ನುವುದೇ ಕಲ್ಪಿತ' ಲೇಖನ ಸ್ವಾರಸ್ಯಕರವಾಗಿ ಮೂಡಿಬಂದಿದೆ.

**ಕೆ.ಆರ್. ಪಾರ್ವತಿ, ವಿಜಯಪುರ**

- ಅನುವಾದಕ ಮೋಹನ ಕುಂಟಾರ್ ಅವರ 'ಕನ್ನಡ ಕೃತಿಗಳಿಗೆ ಮಲಯಾಳಂನಲ್ಲಿ ಬೇಡಿಕೆಯಿಲ್ಲ' ಲೇಖನ ಹೃದಯಸ್ಪರ್ಶಿ. ಕನ್ನಡ ಕೃತಿಗಳು ಮಲಯಾಳಂ ಓದುಗರನ್ನು ಸೆಳೆಯದೇ ಇರುವುದು ದುರದೃಷ್ಟಕರ.

**ಪಾ.ರಾ. ಕಲ್ಮಠ, ಇಳಕಲ್**

- ಲೇಖಕಿ ನೇಮಿಚಂದ್ರ ಅವರ ಸಂದರ್ಶನ (ಸಿ.ಜಿ. ಮಂಜುಳಾ) 'ಕತೆ ಹೇಳುವುದು ಅನಿವಾರ್ಯ ಧರ್ಮ ಮತ್ತು ಕರ್ಮ ನನಗೆ' ಅವರ ಬಹುಮುಖ ವ್ಯಕ್ತಿತ್ವವನ್ನು ಪರಿಚಯಿಸಿತು. 'ಎಳೆಯರ ಆಮೋದ'ದ ಕತೆ, ಕವಿತೆಗಳು ಮನಸಿಗೆ ಮುದ ನೀಡಿದವು.

**ಮೋಹನ ಹಣಗಿ, ಅಮೀನಗಡ, ಹೂ.ನಾ. ಲಲಿತಾ, ಬೆಂಗಳೂರು**

- ಕೆ.ವಿ. ತಿರುಮಲೇಶ್ ಅವರ ಮಕ್ಕಳ ಕವಿತೆಗಳು ಸೊಗಸಾಗಿವೆ.

**ಸುಂದರ್, ಬೆಂಗಳೂರು**

- ಕೆ.ಪಿ. ಸತ್ಯನಾರಾಯಣ ಅವರ 'ಐನೂರರ ನೋಟು' ಕತೆ ಓದಿ ಕಣ್ಣು ತುಂಬಿ ಬಂತು. ಟಿ. ತಿಮ್ಮಪ್ಪ ಅವರ 'ಓ ಮೈ ಲವ್' ಕತೆ ಯಂತ್ರದ ಅವಲಂಬನೆಯ ದುರಂತವನ್ನು ಕಣ್ಣಿಗೆ ಕಟ್ಟುವಂತೆ ಹೇಳಿದೆ.

**ಪಿ. ಜಯವಂತ ಪೈ, ಕುಂದಾಪುರ**

- ಛಾಯಾ ಭಟ್ ಅವರ 'ಬಯಲರಸಿ ಹೊರಟವಳು', ಸುಧಾ ಆಡುಕಳ ಅವರ 'ಒಂದು ಇಡಿಯ ಬಳಪ' ಕತೆಗಳು ಮನಮುಟ್ಟಿದವು. ಈ ಕತೆಗಳ ಭಿನ್ನ ಕಥಾಹಂದರ, ವಿಶಿಷ್ಟ ಪಾತ್ರಗಳು ಕತೆಯ ಓದಿನ ರುಚಿಯನ್ನು ಹೆಚ್ಚಿಸಿವೆ.

**ಸುವರ್ಣಾ ಸಿ.ಎಂ., ಧಾರವಾಡ**